**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(3)/15/2020

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 04-10-2021

**ಅಧಿಸೂಚನೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸಂಸ್ಥೆಗಳಲ್ಲಿ "ಗ್ರೂಪ್-ಡಿ" ವರ್ಗದ ಸಿಬ್ಬಂದಿಗಳ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಪಡೆಯುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 124 ಟಿಪಿಇ 2017, ದಿನಾಂಕ: 14.02.2018.
2. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3) 2017, ದಿನಾಂಕ: 21.07.2018.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 23 ಹೆಚ್.ಪಿ.ಟಿ. 2019. (ಭಾ) ದಿನಾಂಕ: 23.03.2020.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMIOEST(3)/42/2020, ದಿನಾಂಕ: 21.01.2021

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಸಂಸ್ಥೆಯಲ್ಲಿ ಹಾಲಿ ಖಾಲಿಯಿರುವ ಕಛೇರಿ ಸಹಾಯಕರ ಹಾಗೂ ಕಾರ್ಯಗಾರ ಸಹಾಯಕರ ವೃಂದದ ಗ್ರೂಫ್-ಡಿ ದರ್ಜೆಗೆ ಸೇರಿದ ಅಕುಶಲ ಹುದ್ದೆಗಳಿಗೆ ಹೊರ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಭರ್ತಿ ಮಾಡಲು ಉಲ್ಲೇಖ(1) ರನ್ವಯ ಸರ್ಕಾರ ಅನುಮೋದನೆ ನೀಡಿರುತ್ತದೆ. ಅದರಂತೆ, ಟೆಂಡರ್ ಮೂಲಕ ಅರ್ಹತೆ ಪಡೆದು ಮೆ॥ ಮಾತಾ ಟೆಕ್ನಾಲಜೀಸ್, ಧಾರವಾಡ ಸಂಸ್ಥೆಯು ಅಂಗೀಕಾರಗೊಂಡಿದ್ದರಿಂದ, ಸದರಿ ಸಂಸ್ಥೆಗಳಿಗೆ ಉಲ್ಲೇಖ(2) ರನ್ವಯ ಕಾರ್ಯದೇಶ ನೀಡಲಾಗಿದೆ. ಅದರಂತೆ ಈಗಾಗಲೇ ಸೇವೆಯನ್ನು ಪಡೆಯಲಾಗುತ್ತಿದ್ದು, ಉಲ್ಲೇಖ(3) ಸರ್ಕಾರದ ಸೂಚನೆಯನ್ವಯ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೊರಗುತ್ತಿಗೆ "ಡಿ" ದರ್ಜೆ ಸಿಬ್ಬಂದಿಗಳಿಂದ ಸೇವೆಪಡೆಯಬೇಕಾಗಿರುತ್ತದೆ. ಅದ್ದರಿಂದ ಈ ಹಿಂದೆ ಪಡೆಯಲಾಗಿದ್ದ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯಲ್ಲಿ ಬದಲಾವಣೆಯಾಗಿದ್ದು, ಆಯಾ ಸಂಸ್ಥೆಯವರು ಅನುಬಂಧ-1 ರಲ್ಲಿ ಕಾಣಿಸಿರುವ ಹುದ್ದೆಗಳಿಗೆ ಮಾತ್ರ ಮಾನವ ಸಂಪನ್ಮೂಲ ಸಂಸ್ಥೆಯು ಒದಗಿಸುವ ಸಿಬ್ಬಂದಿ ಸೇವೆಯನ್ನು ಪಡೆದುಕೊಳ್ಳತಕ್ಕದ್ದು. ಈ ಪತ್ರದಲ್ಲಿ ಸೂಚಿಸಿರುವ ನಿಬಂಧನೆ ಮತ್ತು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

**ನಿಬಂಧನೆ ಮತ್ತು ಷರತ್ತುಗಳು:-**

1. ಇಲಾಖೆಯಿಂದ ಈಗಾಗಲೇ ಅನುಮತಿ ನೀಡಿರುವ ಹುದ್ದೆಗಳ ಸಂಖ್ಯೆ ಮಿತಿಗೆ ಒಳಪಟ್ಟು, ಒಂದು ವೇಳೆ ನೇರ/ಅನುಕಂಪ ನೇಮಕಾತಿ/ವರ್ಗಾವಣೆ ಮೂಲಕ ಇಲಾಖಾ ನೌಕರರಿಂದ ಭರ್ತಿ ಮಾಡಿದರೆ ಅಂತಹ ಸ್ಥಾನಗಳನ್ನು ವರ್ಗಾವಣೆ/ನಿವೃತ್ತಿ/ಪದೋನ್ನತಿ ಮತ್ತು ಇನ್ನಿತರೆ ಕಾರಣಗಳಿಂದ ತೆರವಾಗುವ ಸ್ಥಾನಗಳಲ್ಲಿ ಆದ್ಯತೆ ಮೇರೆಗೆ ಸೇವೆಯನ್ನು ಈಗಾಗಲೇ ಗೊತ್ತುಪಡಿಸಿರುವ ಸಂಸ್ಥೆಯಿಂದ ಹೊರಗುತ್ತಿಗೆ ಮೂಲಕ ಪಡೆಯಲು ನಿರ್ದೇಶನಾಲಯದಿಂದ ಅನುಮತಿ ಪಡೆಯುವುದು.

4/10

2. ಇಲಾಖೆಯ/ಸಂಸ್ಥೆಯ ಕೆಲಸದ ಸಮಯಕ್ಕೆ ಅನುಗುಣವಾಗಿ ಹಾಗೂ ತುರ್ತು ಸಂಧರ್ಭದಲ್ಲಿ ಹೆಚ್ಚಿನ ಸಮಯದ ಕೆಲಸದ ಅವಶ್ಯಕತೆ ಇದ್ದಲ್ಲಿ ಹಾಗೂ ಇಲಾಖೆಯ/ಸಂಸ್ಥೆಯ ಕೆಲಸಗಳಿಗೆ ಮಾತ್ರ ಹೊರಗುತ್ತಿಗೆ ಸಿಬ್ಬಂದಿ ಸೇವೆ ಪಡೆಯುವುದು.
3. ಹೊರಗುತ್ತಿಗೆ ಸಂಸ್ಥೆಯ ಸಿಬ್ಬಂದಿಗೆ ಹಾಜರಾತಿ ತಖ್ತೆಯನ್ನು ಪ್ರತ್ಯೇಕವಾಗಿ ಅವರ (ಹೊರಗುತ್ತಿಗೆ ಸಂಸ್ಥೆಯವರು ಒದಗಿಸುವ) ನಿಗದಿತ ನಮೂನೆಯಲ್ಲಿ ನಿರ್ವಹಿಸುವಂತೆ ನೋಡಿಕೊಳ್ಳುವುದು. ಸದರಿ ಹಾಜರಾತಿಯನ್ನು ಪ್ರತಿ ತಿಂಗಳೂ 30/31 ನೇ ತಾರೀಖಿನೊಳಗಾಗಿ ನಿರ್ದೇಶನಾಲಯಕ್ಕೆ 'ಹಾರ್ಡ್‌ಕಾಪಿ' ಮತ್ತು ಹೊರಗುತ್ತಿಗೆ ಸಂಸ್ಥೆಯ ಇ-ಮೇಲ್: matha2007@gmail.com ಗೆ ತಮ್ಮ ಕಛೇರಿ ಇ-ಮೇಲ್ ಮುಖಾಂತರ ಕಡ್ಡಾಯವಾಗಿ ಕಳುಹಿಸುವುದು.
4. ಹೊರಗುತ್ತಿಗೆ ಸಿಬ್ಬಂದಿಗಳಿಂದ ಸರ್ಕಾರದ ಸ್ವತ್ತುಗಳಿಗೆ ಹಾನಿ ಉಂಟಾದಲ್ಲಿ ನಷ್ಟಭರಿಸಿಕೊಡಲು ಹೊರಗುತ್ತಿಗೆ ಸಂಸ್ಥೆಗೆ ಸೂಚಿಸುವುದು.
5. ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಅಥವಾ ಸಂಸ್ಥೆಯ ಷರತ್ತುಗಳ ಉಲ್ಲಂಘನೆ ಆಗಿದ್ದಲ್ಲಿ ಅಂತಹ ಸಿಬ್ಬಂದಿಯನ್ನು ಸೇವೆಯಿಂದ ವಜಾಗೊಳಿಸಲು ತಿಳಿಸಿ ಹಾಗೂ ಅಂತಹ ಸ್ಥಳದಲ್ಲಿ ಇನ್ನೋರ್ವ ಸಿಬ್ಬಂದಿಯನ್ನು ನಿಯೋಜಿಸುವಂತೆ ವರದಿಯನ್ನು ಸಂಬಂಧಪಟ್ಟ ಸಂಸ್ಥೆಗೆ ಸಲ್ಲಿಸುವುದು.
6. ಟೆಂಡರ್‌ದಾರರು ನೇಮಿಸುವ ಸಿಬ್ಬಂದಿಗಳು ಯಾವುದೇ ಅಪರಾಧ, ಧೂಮಪಾನ ಹಾಗೂ ಇತರೆ ಯಾವುದೇ ಕಾನೂನು ಬಾಹಿರ ಹಿನ್ನೆಲೆ ಹೊಂದಿರುವ ಬಗ್ಗೆ ಗಮನಕ್ಕೆ ಬಂದಲ್ಲಿ ತಕ್ಷಣ ಅಂತಹ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಹೊರಗುತ್ತಿಗೆ ಸಂಸ್ಥೆ ತಿಳಿಸಿ ಸದರಿ ಹುದ್ದೆಗೆ ಇನ್ನೋರ್ವ ಬೇರೆ ಹೊರಗುತ್ತಿಗೆ ಸಿಬ್ಬಂದಿಯನ್ನು ನಿಯೋಜಿಸುವಂತೆ ತಿಳಿಸಿ ಕ್ರಮವಹಿಸುವುದು.
7. ಇಂಡಸ್ಟ್ರೀಯಲ್ ಡಿಸ್ಪೂಟ್ ಆಕ್ಟ್ 1947 ರಂತೆ ಹೊರಗುತ್ತಿಗೆ ನೌಕರರ ಸೇವೆಯನ್ನು ಪ್ರತಿ 240 ದಿನಗಳಿಗೆ/ಹನ್ನೊಂದು ತಿಂಗಳಿಗೆ ಸ್ಥಗಿತಗೊಳಿಸಿ ಸೇವೆಯಿಂದ ಕಡ್ಡಾಯವಾಗಿ ಬಿಡುಗಡೆ ಆಗುವಂತೆ ಹಾಗೂ ಸದರಿ ಬಿಡುಗಡೆಗೊಳಿಸಿದ ಸಿಬ್ಬಂದಿ ಹುದ್ದೆಗೆ ಇನ್ನೋರ್ವ ಬೇರೆ ಹೊರಗುತ್ತಿಗೆ ಸಿಬ್ಬಂದಿಯನ್ನು ತಕ್ಷಣ ನೇಮಕಾತಿ ಮಾಡುವಂತೆ ಹೊರಗುತ್ತಿಗೆ ಸಂಸ್ಥೆಗೆ ತಿಳಿಸಿ ಕ್ರಮವಹಿಸುವುದು.
8. ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿರುವ ಸಿಬ್ಬಂದಿಗಳು ಟೆಂಡರ್‌ದಾರ ಸಂಸ್ಥೆಯ ಸಿಬ್ಬಂದಿಗಳಾಗಿರುತ್ತಾರೆಯೇ ಹೊರತು ಸರ್ಕಾರದ ನೌಕರರಾಗಿರುವುದಿಲ್ಲ. ಅವರು ಸರ್ಕಾರದ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ. ಆದ್ದರಿಂದ ಯಾವುದೇ ಸಿಬ್ಬಂದಿಗಳಿಗೆ ಅಧಿಕಾರಿಗಳು/ಸಿಬ್ಬಂದಿಗಳು ಸರ್ಕಾರದ ಸೌಲಭ್ಯಗಳನ್ನು ನೀಡುವ ಬಗ್ಗೆ ಆಶ್ವಾಸನೆ ನೀಡಿದಲ್ಲಿ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.
9. ಟೆಂಡರ್‌ದಾರರು ನಿಯೋಜಿಸುವ ಯಾವುದೇ ಸಿಬ್ಬಂದಿಯವರು ಸೇವೆಗೆ ದೀರ್ಘಾವಧಿ ರಜೆ ಪಡೆದಲ್ಲಿ/ಅನಧಿಕೃತ ಗೈರುಹಾಜರು ಆದಲ್ಲಿ/ಸೇವೆಯನ್ನು ತೃಪ್ತಿಕರವಾಗಿ ನೀಡದಿದ್ದಲ್ಲಿ/ಇಲಾಖೆಯ ಅಧಿಕಾರಗಳೊಂದಿಗೆ ಅನುಚಿತವಾಗಿ/ಇಲಾಖೆಯ ನಿಯಮಾವಳಿಗೆ ವಿರುದ್ಧವಾಗಿ ವರ್ತಿಸಿದ್ದಲ್ಲಿ/ಸೇವೆ ಒದಗಿಸುವ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಕೂಡಲೇ ಅಂತಹ ಸಿಬ್ಬಂದಿಯನ್ನು ವಜಾಗೊಳಿಸುವುದು, ಸದರಿ ಸ್ಥಳದಲ್ಲಿ ಮತ್ತೊಬ್ಬ ಬದಲಾಯಿತ ಸಿಬ್ಬಂದಿಯನ್ನು ನಿಯೋಜಿಸುವ ಅಧಿಕಾರ/ಜವಾಬ್ದಾರಿ ಟೆಂಡರ್‌ದಾರದ್ದಾಗಿರುತ್ತದೆ. ಟೆಂಡರ್‌ದಾರರಿಂದ ನೇಮಕಾತಿ ಮಾಡಿಕೊಳ್ಳುವ/ವಜಾಗೊಳಿಸಲ್ಪಡುವ/ಸಿಬ್ಬಂದಿಯ ನೇಮಕಾತಿ ನವೀಕರಣದ ವಿಷಯದಲ್ಲಿ ಇಲಾಖೆಯ ಅಧಿಕಾರಿಗಳ/ಸಿಬ್ಬಂದಿಗಳ ಹಸ್ತಕ್ಷೇಪ ಇರುವಂತಿಲ್ಲ ಒಂದು ವೇಳೆ ಸದರಿ ವಿಷಯಲ್ಲಿ ಇಲಾಖೆಯ ಅಧೀಕಾರಿ/ಸಿಬ್ಬಂದಿಗಳು ಹಸ್ತಕ್ಷೇಪ ಮಾಡಿದಲ್ಲಿ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು ಮತ್ತು ಟೆಂಡರ್‌ದಾರರು ನಿಯೋಜಿಸುವ ಯಾವುದೇ ಸಿಬ್ಬಂದಿಯ ಸಂಬಂಧವು ಸೇವೆಗೆ ಮಾತ್ರ ಸೀಮಿತವಾಗಿರುತ್ತದೆ.
10. ಟೆಂಡರುದಾರರು ನಿಯೋಜಿಸುವ ಸಿಬ್ಬಂದಿಗೆ, ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಬರುತ್ತದೆಯೇ ಎಂಬುದನ್ನು ಖಚಿತಪಡಿಸಿಕಳ್ಳತಕ್ಕದ್ದು.

11. ಇಲಾಖೆಯಿಂದ ಅಧಿಕಾರಿಗಳು ಆಯಾ ಸಂಸ್ಥೆಗಳಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ಹಾಜರಾತಿ ಪುಸ್ತಕದಲ್ಲಿ ನಮೂದಿಸಿರುವ ಸಂಖ್ಯೆಗಳಿಗಷ್ಟೇ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರಬೇಕು. ಇಲ್ಲವಾದಲ್ಲಿ ಸಂಸ್ಥೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.
12. ಯಾವುದೇ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಇಲಾಖೆಗೆ ಆಡಳಿತಾತ್ಮಕವಾಗಿ ತೊಂದರೆ ಉಂಟಾದಲ್ಲಿ ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಜಂಟಿ ನಿರ್ದೇಶಕರು (ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ (ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ):**

1. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಬಸವನಬಾಗೇವಾಡಿ;
2. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ;
3. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಹೊನ್ನಾಳಿ;
4. ಮೆ|| ಮಾತಾ ಟೆಕ್ನಾಲಜೀಸ್, ಧಾರವಾಡ;
5. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

ಮಾನ್ಯ ಆಯುಕ್ತರ ಆಪ್ತಶಾಖೆಗೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ದಿನಾಂಕ: 01.10.2021 ರ ಅಧಿಸೂಚನೆ ಸಂಖ್ಯೆ: DTE-ADMI0EST(3)/15/2020 ಕ್ಕೆ ಅನುಬಂಧ-1**

| **ಸಂಸ್ಥೆಯ ಸಂಕೇತ** | **ಸಂಸ್ಥೆಯ ಹೆಸರು** | **ಪ್ರಸ್ತುತ ನೇಮಕಾತಿ ಮಾಡಬೇಕಾದ ಗ್ರೂಪ್ 'ಡಿ' ಹುದ್ದೆಗಳ ಸಂಖ್ಯೆ** |
|---|---|---|
| | **ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳು** | |
| 190 | ಸರ್ಕಾರಿ ಪಾಲಿಟೆಕ್ನಿಕ್, ಬಸವನಬಾಗೇವಾಡಿ, ವಿಜಯಪುರ ಜಿಲ್ಲೆ. | 03 |
| | ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ, ದಾವಣಗೆರೆ ಜಿಲ್ಲೆ. | 03 |
| 194 | ಸರ್ಕಾರಿ ಪಾಲಿಟೆಕ್ನಿಕ್, ಹೊನ್ನಾಳಿ, ದಾವಣಗೆರೆ ಜಿಲ್ಲೆ. | 03 |

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಜಂಟಿ ನಿರ್ದೇಶಕರು (ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು